**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.2800/2022**

ಪಿ.ಡಬ್ಲ್ಯೂ: 2

ಸಿ.ಡಬ್ಲ್ಯೂ: 2

| | | |
|---|---|---|
| ಸಾಕ್ಷಿದಾರರ ಹೆಸರು | : | ರಂಜಿತ |
| ಗಂಡನ ಹೆಸರು: | : | ಆನಂದ್ |
| ವಯಸ್ಸು | : | **29 ವರ್ಷ** |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ತರೀಕೆರೆ |

**ದಿನಾಂಕ: 24-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿ: **23-06-2022** ರಂದು ನಾನು ಹಾಗೂ ನನ್ನ ಪತಿ ನಮ್ಮ ದ್ವಿಚಕ್ರವಾಹನ ನಂ. ಕೆಎ **18** ಇ ಎ **6518** ರಲ್ಲಿ ಬೆಳಿಗ್ಗೆ **9-00** ಗಂಟೆಗೆ ನಮ್ಮ ಸಂಬಂಧಿಕರ ಮದುವೆಗೆ ಕಲ್ಲಾಪುರಕ್ಕೆ ಹೋಗಿ ವಾಪಾಸ್ಸು ಕಲ್ಲಾಪುರದಿಂದ ತರೀಕೆರೆಗೆ ಬರುತ್ತಿರುವಾಗ ಸುಮಾರು **2-30** ಸಮಯದಲ್ಲಿ ಶಿವಪುರದ ಹತ್ತಿರ ನಮ್ಮ ಎದುರುಗಡೆಯಿಂದ ಬಿಳಿ ಬಣ್ಣದ ಸ್ವಿಫ್ಟ್ ಕಾರು ವೇಗವಾಗಿ ಬಂದು ನಮಗೆ ಡಿಕ್ಕಿಪಡಿಸಿದ ಪರಿಣಾಮ ನಾವು ಇಬ್ಬರು ಕೆಳಗೆ ಬಿದ್ದಿದ್ದು ನನಗೆ ನನ್ನ ಎರಡು ಕಾಲುಗಳು ಪ್ರ್ಯಾಕ್ಚರ್ ಆಗಿ ನನ್ನ ಸೊಂಟದ ಡಿಸ್ಕ ಫ್ಲಾಕ್ಚರ್ ಆಗಿದ್ದು, ನನ್ನ ಬಲಕೈ ಕೂಡ ಫ್ಲಾಕ್ಚರ್ ಆಗಿರುತ್ತದೆ. ನನ್ನ ಗಂಡನಿಗೆ ಕೈ ಕಾಲಿಗೆ ತೀವ್ರತರಹದ ಪೆಟ್ಟಾಗಿ ಅಲ್ಲೆ ಇದ್ದ ಡಿವೈಡರ್ ಗೆ ತಲೆಗೆ ಹೊಡೆದುಕೊಂಡು ಸ್ಥಳದಲ್ಲೆ ಮೃತಪಟ್ಟಿರುತ್ತಾರೆ. ಅಲ್ಲೇ ಇದ್ದ ಜನರು ಬಂದು ನಮ್ಮಗಳನ್ನು ಬೀರೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿಂದ ನನ್ನನ್ನು ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಮೆಟ್ರೊ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಅಲ್ಲಿಂದ ತರೀಕೆರೆ ಆಸ್ಪತ್ರೆಗೆ ಕರೆದುಕೊಂಡು ನನ್ನ ಮೃತ ಗಂಡನನ್ನು ತೋರಿಸಿ, ನಂತರ ನನ್ನನ್ನು ಮಣಿಪಾಲ್ ನ ಕಸ್ತೂರುಬಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ದೂರನ್ನು ನನ್ನ ಮೈದುನರವರು ಬೀರೂರು ಪೊಲೀಸ್ ಠಾಣೆಯಲ್ಲಿ ನೀಡಿರುತ್ತಾರೆ. ನಾನು ಮಣಿಪಾಲ್ ನ ಕುಸ್ತೂರಬಾ ಆಸ್ಪತ್ರೆಯಲ್ಲಿ **8** ದಿನಗಳ ಕಾಲ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ.

**ಪಾಟೀ ಸವಾಲು ಃ ಆರೋಪಿ ಪರ** ಶ್ರೀ ಸಿ ಎನ್ ಜಿ **ವಕೀಲರಿಂದ.**

ನೀವು ಬರುತ್ತಿದ್ದ ರಸ್ತೆಯಲ್ಲಿ ಹೊಸದಾಗಿ ನಾಲ್ಕು ಲೈನ್ ರಸ್ತೆಯನ್ನು ಮಾಡುತ್ತಿದ್ದರು ಎಂದರೆ ಸರಿ. ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿದ್ದ ಕಾರಣ ಬಲಭಾಗದಲ್ಲಿ ಒಂದು ಲೈನ್ ನ್ನು ಬಿಟ್ಟಿದ್ದು ಅದರಲ್ಲಿ ನಾವು ಬರುತ್ತಿದ್ದೆವು ಎಂದರೆ ಸರಿ. ಸದರಿ ರಸ್ತೆಯಲ್ಲಿ ಕೆಲಸ ನಡೆಯುತ್ತಿದ್ದು, ಜಲ್ಲಿ ಕಲ್ಲುಗಳು ಹಾಕಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಾವು ಬರುತ್ತಿದ್ದ ರಸ್ತೆ 15 ರಿಂದ 20 ಅಡಿ ಸರ್ವಿಸ್ ರಸ್ತೆ ಆಗಿತ್ತು ಎಂದರೆ ಸರಿ. ಒಂದೇ ರಸ್ತೆಯಲ್ಲಿ ನೂರಾರು ವಾಹನಗಳು ಓಡಾಡುತ್ತಿದ್ದವು ಎಂದರೆ ಸರಿ. ಬೇರೆ ವಾಹನಗಳು ಎಷ್ಟು ವೇಗವಾಗಿ ಓಡಾಡುತ್ತಿದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ರಸ್ತೆಯಲ್ಲಿ ಕಾಮಗಾರಿ ಕೆಲಸ ನಡೆಯುತ್ತಿದ್ದ ಕಾರಣ ಎಲ್ಲಾ ವಾಹನಗಳು ನಿಧಾನವಾಗಿ ಹೋಗುತ್ತಿತ್ತು ಎಂದರೆ ಸಾಕ್ಷಿ ಕೆಲವು ವಾಹನಗಳು ವೇಗವಾಗಿ ಹೋಗುತ್ತಿದ್ದವು ಎಂದು ನುಡಿದಿರುತ್ತಾರೆ. ನಾನು ನನ್ನ ಗಂಡ ಓಡಿಸುತ್ತಿದ್ದ ದ್ವಿಚಕ್ರ ವಾಹನದಲ್ಲಿ ಎರಡೂ ಭಾಗದಲ್ಲಿ ಕುಳಿತಿದ್ದೆ. ದ್ವಿಚಕ್ರ ವಾಹನವನ್ನು ಚಲಾಯಿಸಲು ನಿಮ್ಮ ಗಂಡನಿಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸಾಕ್ಷಿ ಅದು ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಮಗೆ ಸದರಿ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಅಪಘಾತವಾದ ಒಂದು ತಿಂಗಳ ಹಿಂದೆ ನಮ್ಮ ವಿವಾಹ ಆಗಿತ್ತು. ವಾಹನದಲ್ಲಿ ಚಲಿಸುತ್ತಿರುವಾಗ ನೀವು ನಿಮ್ಮ ಗಂಡನ ಜೊತೆ ಮಾತನಾಡುತ್ತಿದ್ದಿರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಬೀರೂರಿನ ರೈಲ್ವೆ ಗೇಟ್ ಹತ್ತಿರ ಮಾತನಾಡಿರುತ್ತೇನೆ, ಬೇರೆ ಎಲ್ಲೂ ಮಾತನಾಡಿರುವುದಿಲ್ಲ. ನಿಮ್ಮ ಗಂಡನಿಗೆ ವಾಹನ ಚಾಲನೆ ಮಾಡಲು ಸರಿಯಾಗಿ ಬರದೇ ಇದ್ದ ಕಾರಣ ಸದರಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ಆದ ತಕ್ಷಣ ಜ್ಞಾನ ತಪ್ಪಿತ್ತು ಎಂದರೆ ಸರಿ. ನನಗೆ ಜ್ಞಾನ ಬಂದು ಜನರು ನೀರು ಕುಡಿಸಿದ ನಂತರ ಅಲ್ಲೆಪಕ್ಕದಲ್ಲಿ ಕುಳಿತುಕೊಂಡಾಗ ಯಾವ ವಾಹನ ನಮಗೆ ಬಂದು ಗುದ್ದಿರುತ್ತದೆ ಎಂದು ನೋಡಿರುತ್ತೇನೆ. ಅಪಘಾತವಾದ ತಕ್ಷಣ ತಿಳಿದಿರುವುದಿಲ್ಲ, ನಂತರ ತಿಳಿದುಬಂದಿರುತ್ತದೆ. ಅಪಘಾತವಾದ ಶಬ್ದ ಕೇಳಿಸಿದ ನಂತರ ನನಗೆ ಅಪಘಾತವಾದ ವಿಚಾರ ತಿಳಿದಿರುತ್ತದೆ. ಆರೋಪಿಯು ತಮ್ಮ ವಾಹನವನ್ನು

30-40 ವೇಗದಲ್ಲಿ ಓಡಿಸಿಕೊಂಡು ಬರುತ್ತಿದ್ದು, ನಿಮ್ಮ ಗಂಡ ನಿರ್ಲಕ್ಷತದಿಂದ ಅತಿವೇಗ ವಾಗಿ ಓಡಿಸಿಕೊಂಡು ಬಂದು ಆರೋಪಿ ವಾಹನಕ್ಕೆ ಡಿಕ್ಕಿಪಡಿಸಿದ ಕಾರಣ ಸದರಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ನಿಮ್ಮ ಗಂಡನ ನಿರ್ಲಕ್ಷತನವೇ ಕಾರಣ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಚಾಸಾ-1 ರವರು ದೂರು ನೀಡಲು ಅವರಿಗೆ ಯಾರು ಮಾಹಿತಿ ನೀಡಿದರು ಎಂದು ನನಗೆ ತಿಳಿದಿರುವುದಿಲ್ಲ. ನಿಮ್ಮ ಪತಿ ತೀರಿಕೊಂಡಿದ್ದರಿಂದ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಚಾಸಾ-1 ರವರು ಸಹ ಆರೋಪಿಯ ಮೇಲೆ ಸುಳ್ಳು ದೂರನ್ನು ನೀಡಿರುತ್ತಾರೆಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**